ಪ್ರಧಾನ ಜಿಲ್ಲಾ ಮತ್ತು ಸತ್ರ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ.

ಸ್ಪೆಷಲ್ ಕೇಸ್ ನಂಃ **520/2022**

ಪಿರ್ಯಾದುದಾರರುಃ ರಾಜ್ಯದ ಪರ
ಹಾಸನ ಬಡಾವಣೆ ಪೊಲೀಸರುಃ

ವಿರುದ್ಧ

ಆರೋಪಿಗಳು ಃ ಪೃಥ್ವಿ ಬಿ.ಆರ್

ಃ ದೋಷಾರೋಪಣೆ ಃ

**ಹಾಸನದ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶನಾದ ಟಿ.ಎನ್. ಇನವಳ್ಳಿ ನಾನು,**

ಆರೋಪಿ

ಪೃಥ್ವಿ ಬಿ.ಆರ,
ತಂದೆ ರಂಗೇಗೌಡ,
ವಯಸ್ಸು **41** ವರ್ಷ,
ಸರ್ಕಾರಿ ಶಾಲೆಯ ಹತ್ತಿರ, **4** ನೇ ಅಡ್ಡರಸ್ತೆ,
ಬೀರನಹಳ್ಳಿ ಕೆರೆ, ಹಾಸನ ಟೌನ್
ಹಾಸನ

ನಿಮ್ಮ ವಿರುದ್ಧ ಮಾಡುವ ದೋಷಾರೋಪಣೆ ಏನೆಂದರೆ,

ದಿನಾಂಕಃ **08.10.2021** ರಂದು ಬೆಳಿಗ್ಗೆ **11.30** ಗಂಟೆ ಸಮಯದಲ್ಲಿ ಹಾಸನ ಬಡಾವಣೆ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕರಾಗಿದ್ದ ಚಾಸಾ.**1** ಕೃಷ್ಣರಾಜುರವರಿಗೆ ಬಾತ್ಮಿದಾರರಿಂದ ಬಂದ ಮಾಹಿತಿ ಮೇರೆಗೆ, ಬೀರನಹಳ್ಳಿ ಕೆರೆಯ, ನೀವು ಆರೋಪಿ ಮನೆಯ ಕಾಂಪೌಂಡ್ ನಲ್ಲಿ ಗಾಂಜಾ ಗಿಡದ ಸೊಪ್ಪನ್ನು ಬೆಳೆದು ಕತ್ತರಿಸಿ ಮಾರಾಟ ಮಾಡಲು ಅಕ್ರಮವಾಗಿ ಮಾದಕ ವಸ್ತುವಾದ ಗಾಂಜಾ ಸೊಪ್ಪನ್ನು ಇಟ್ಟಿರುವುದಾಗಿ ತಿಳಿದುಬಂದಿದ್ದು, ಚಾಸಾ-**1** ರವರು ಅವರ ಮೇಲಧಿಕಾರಿಗಳಿಗೆ ವಿಚಾರ ತಿಳಿಸಿ, ಚಾಸಾ-**2** ರಿಂದ ಚಾಸಾ-**6** ರವರೊಂದಿಗೆ ಇಲಾಖಾ ಜೀಪು ಸಂಖ್ಯೆ ಕೆಎ-**13**-ಜಿ-**791** ರಲ್ಲಿ ಮಧ್ಯಾಹ್ನ **1.30** ಗಂಟೆಗೆ ಠಾಣೆಯಿಂದ ಹೊರಟು ಮಧ್ಯಾಹ್ನ **1.50** ಗಂಟೆಗೆ ಹಾಸನ ಬೀರನಹಳ್ಳಿ ಕೆರೆ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಹತ್ತಿರ, **4** ನೇ ಕ್ರಾಸ್, ಶನಿದೇವರ ದೇವಸ್ಥಾನದ ಹತ್ತಿರ ಹೋಗಿ ಸ್ವಲ್ಪ ದೂರದಲ್ಲಿ ಮರೆಯಲ್ಲಿ ಜೀಪನ್ನು ನಿಲ್ಲಿಸಿ ಎಲ್ಲರೂ ಜೀಪಿನಿಂದ

ಇಳಿದು ಸ್ಥಳಕ್ಕೆ ಹೋಗಿ ದಾಳಿ ಮಾಡಿದಾಗ, ನೀವು ಆರೋಪಿ ವಾಸವಿದ್ದ ಖಾಲಿಜಾಗದಲ್ಲಿ ಗಾಂಜಾ ಹಸಿ ಸೊಪ್ಪು ಮತ್ತು ಕಡ್ಡಿಯನ್ನು ಇಟ್ಟಿದ್ದು ಕಂಡುಬಂದಿದ್ದು, ಸದರಿ ಗಾಂಜಾ ಹಸಿಸೊಪ್ಪು ಮತ್ತು ಕಡ್ಡಿಯನ್ನು ತೂಕ ಮಾಡಲಾಗಿ **3** ಕೆಜಿ **515** ಗ್ರಾಂ ಇದ್ದು, ಯಾವುದೆ ಪರವಾನಗಿ ಅಥವ ಅನುಮತಿ ಇಲ್ಲದೆ ಅಕ್ರಮವಾಗಿ ಮಾರಾಟ ಮಾಡಲು ಈ ಮೇಲೆ ಹೇಳಿದ ಪ್ರಮಾಣದ ಗಾಂಜಾ ಸೊಪ್ಪನ್ನು ಸಂಗ್ರಹಿಸಿ ಇಟ್ಟಿದ್ದಿರಿ ಮತ್ತು ಈ ಕಾರಣದಿಂದ ನೀವು ಆರೋಪಿ ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುವ ಮಾದಕ ದ್ರವ್ಯ ಮತ್ತು ಸೈಕೋಟ್ರೋಪಿಕ್ ವಸ್ತುಗಳ ಕಾಯಿದೆ **1982** ರ ಕಲಂ **8**(ಸಿ) ಯನ್ನು ಉಲ್ಲಂಘಿಸಿದ್ದು, ಸದರಿ ಕಾಯಿದೆಯ ಕಲಂ **20**(ಎ)**(i)** ಅಡಿಯಲ್ಲಿ ಅಪರಾಧ ಮಾಡಿರುತ್ತೀರಿ.

ಮೇಲಿನ ದೋಷಾರೋಪಣೆಗೆ ನೀವು ಈ ನ್ಯಾಯಾಲಯದ ವಿಚಾರಣೆಗೆ ಒಳಪಡಬೇಕು ಎಂದು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕ:**23** ನೇ ಜೂನ್ **2023** ನೇ ಇಸವಿ.

(ಟಿ.ಎನ್. ಇನವಳ್ಳಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಹಾಸನ.

**ಪ್ರಧಾನ ಜಿಲ್ಲಾ ಮತ್ತು ಸತ್ರ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ.**

**ಸ್ಪೆಷಲ್ ಕೇಸ್ ನಂಃ 520/2022**

ಪಿರ್ಯಾದುದಾರರುಃ ರಾಜ್ಯದ ಪರ
ಹಾಸನ ಬಡಾವಣೆ ಪೊಲೀಸರುಃ

ವಿರುದ್ಧ

ಆರೋಪಿಗಳು ಃ ಪೃಥ್ವಿ ಬಿ.ಆರ್

| | | |
|---|---|---|
| ಆರೋಪಿಯ ಹೆಸರು | ಃ | ಪೃಥ್ವಿ ಬಿ.ಆರ್ |
| ತಂದೆಯ ಹೆಸರು | ಃ | ರಂಗೇಗೌಡ |
| ವಯಸ್ಸು | ಃ | 41 ವರ್ಷ |
| ವೃತ್ತಿ | ಃ | ಚಾಲಕ |
| ವಾಸ | ಃ | ಸರ್ಕಾರಿ ಶಾಲೆ ಹತ್ತಿರ, 4 ನೇ ಅಡ್ಡರಸ್ತೆ, ಬೀರನಹಳ್ಳಿ ಕೆರೆ, ಹಾಸನ |

**ಃಃಆಪಾದನೆಃಃ**

ಪ್ರಶ್ನೆ 1ಃ ಈಗ ನಿನಗೆ ಓದಿ ಹೇಳಿದ ದೋಷಾರೋಪಣೆಯನ್ನು ಅರ್ಥ ಮಾಡಿಕೊಂಡಿರುವೆಯಾ?

ಉತ್ತರಃ

ಪ್ರಶ್ನೆ 2ಃ ತಪ್ಪು ಒಪ್ಪಿಕೊಳ್ಳುವೆಯಾ ಅಥವಾ ವಿಚಾರಣೆಗೆ ಒಳಪಡುತ್ತೀಯಾ?

ಉತ್ತರಃ

**ಆರೋಪಿಗೆ ದೋಷಾರೋಪಣೆಯನ್ನು ಓದಿ ಹೇಳಿದ್ದು, ಆರೋಪಿಯು ಕೊಟ್ಟ ಉತ್ತರವನ್ನು ಆತನು ಹೇಳಿದಂತೆಯೇ ಯಥಾವತ್ತಾಗಿ ದಾಖಲಿಸಲಾಗಿದೆ ಎಂದು ಈ ಮೂಲಕ ದೃಢೀಕರಿಸಲಾಗಿದೆ.**

ದಿನಾಂಕಃ 23 ನೇ ಜೂನ್ ಮಾಹೆ 2023 ನೇ ಇಸವಿ.

**(ಟಿ.ಎನ್. ಇನವಳ್ಳಿ)**
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಹಾಸನ.**